# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 208
ಮಾನ್ಯ ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ)
ಉತ್ತರಿಸುವ ದಿನಾಂಕ : 28-01-2026
ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬಾಹ್ಯ ಆರ್ಥಿಕ ನೆರವಿನೊಂದಿಗೆ ರೂ.5736 ಕೋಟಿ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ 5730 ಕೋಟಿ ರೂಗಳಲ್ಲಿ ರಾಜ್ಯದಲ್ಲಿ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ; | ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-4 ರಡಿಯಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಬಾಹ್ಯ ಆರ್ಥಿಕ ನೆರವಿನೊಂದಿಗೆ ಒಟ್ಟಾರೆ ರೂ.5736 ಕೋಟಿ ಯೋಜನಾ ವೆಚ್ಚದಲ್ಲಿ ಸುಮಾರು 875 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿರುತ್ತದೆ. ಸದರಿ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಆಯ್ಕೆರುಗೊಳಿಸಲಾಗಿರುವ ರಾಜ್ಯ ಹೆದ್ದಾರಿಗಳ ಆದ್ಯತಾ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಹಾಸನದಲ್ಲಿ 21.10 ಕಿ.ಮೀ ಹೊರ ವರ್ತುಲ ರಸ್ತೆ ಕಾಮಗಾರಿ ಯಾವ ಹಂತದಲ್ಲಿದೆ; ಮತ್ತು ಮೈಸೂರು ವರ್ತುಲ ರಸ್ತೆ ಯೋಜನೆ, ಬೆಳಗಾವಿಯ ಹೊರ ವರ್ತುಲ ರಸ್ತೆ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡುವುದು; | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಹಾಸನ ಜಿಲ್ಲೆ, ಹಾಸನ ಪಟ್ಟಣದಲ್ಲಿ ನೆಲಮಂಗಲ-ಮಂಗಳೂರು ರಸ್ತೆ (ರಾಷ್ಟ್ರೀಯ ಹೆದ್ದಾರಿ-75) ಯಿಂದ ಅರಸೀಕೆರೆ ರಸ್ತೆ (ರಾಜ್ಯ ಹೆದ್ದಾರಿ-71) ಹಳೇಬೀಡು ರಸ್ತೆ ಮತ್ತು ಬೇಲೂರು ರಸ್ತೆ (ರಾಷ್ಟ್ರೀಯ ಹೆದ್ದಾರಿ-373) ಮುಖಾಂತರ 21.10 ಕಿ.ಮೀ ಉದ್ದದ ಹೊರವರ್ತುಲ ರಸ್ತೆ ನಿರ್ಮಾಣ ಕಾಮಗಾರಿಯನ್ನು ರೂ.200.00 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ದಿನಾಂಕ:31-05-2019 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, EPC (Engineering Procurement & Construction) ಮಾದರಿಯಲ್ಲಿ ಅನುಷ್ಠಾನಗೊಳಿಸಲು 30 ತಿಂಗಳುಗಳ ನಿರ್ಮಾಣ ಅವಧಿಯೊಂದಿಗೆ ರೂ.190.65 ಕೋಟಿ ಮೊತ್ತಕ್ಕೆ ದಿನಾಂಕ:23-07-2019 ರಂದು ಟೆಂಡರ್ ಮೂಲಕ ಗುತ್ತಿಗೆ ವಹಿಸಲಾಗಿರುತ್ತದೆ.<br><br>ಸದರಿ ಯೋಜನೆಗೆ, ಅಗತ್ಯವಿರುವ ಒಟ್ಟು ಭೂಸ್ವಾಧೀನದ ಪೈಕಿ 2.50 ಕಿ.ಮೀ ಉದ್ದಕ್ಕೆ ಭಾಗಶಃ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರಸ್ತೆ ನಿರ್ಮಾಣಕ್ಕಾಗಿ ಗುತ್ತಿಗೆದಾರರಿಗೆ ದಿನಾಂಕ:30-01-2020 ರಂದು ಹಸ್ತಾಂತರಿಸಲಾಗಿರುತ್ತದೆ. ಈ ಭಾಗದಲ್ಲಿ ಕಾಮಗಾರಿಯ ಪ್ರಾರಂಭಿಕ ಹಂತದಲ್ಲಿ ಸ್ಥಳೀಯರು ಅಡ್ಡಿಪಡಿಸಿದ ಕಾರಣ ಕಾಮಗಾರಿಯನ್ನು ಮುಂದುವರಿಸಲು ಸಾಧ್ಯವಾಗಿರುವುದಿಲ್ಲ. ಮುಂದುವರೆದು, ಹಲವಾರು ಕಾರಣಗಳಿಂದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದರಿಂದ ರಸ್ತೆ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ. ಗುತ್ತಿಗೆ ಕರಾರು ಕೈಗೊಂಡು ಸುಮಾರು ವರ್ಷಗಳ ನಂತರವು ಭೂಸ್ವಾಧೀನ ಸಮಸ್ಯೆಗಳಿಂದಾಗಿ ಇಲ್ಲಿಯುವರೆಗೆ ಕಾಮಗಾರಿಯನ್ನು ಪುನರ್ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. |

| | | |
|---|---|---|
| | | ಈ ಹಿನ್ನೆಲೆಯಲ್ಲಿ, ಸದರಿ ಹೊರವರ್ತುಲ ರಸ್ತೆ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ಯಥಾ ಸ್ಥಿತಿಯಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿರುತ್ತದೆ.<br><br>ಮೈಸೂರು ನಗರದ ಹಾಲಿ ಇರುವ ವರ್ತುಲ ರಸ್ತೆಯನ್ನು ದಿನಾಂಕ:19-11-2025 ರಂದು ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಲಯದಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿರುತ್ತದೆ. ಪ್ರಸ್ತುತ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸದರಿ ವರ್ತುಲ ರಸ್ತೆಗೆ ಸಂಬಂಧಿಸಿದಂತೆ ಯಾವುದೇ ಹೊಸ ಪ್ರಸ್ತಾವನೆ ಇರುವುದಿಲ್ಲ.<br><br>ಬೆಳಗಾವಿ ಹೊರ ವರ್ತುಲ ರಸ್ತೆ ಯೋಜನೆಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಮೂರು ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಪ್ರಸ್ತುತ, ಪ್ಯಾಕೇಜ್-I ರ ಕಾಮಗಾರಿಗೆ ಅಗತ್ಯವಿರುವ ಜಮೀನು ಭೂಸ್ವಾಧೀನವಾಗದ ಕಾರಣ ಟೆಂಡರ್‌ನ್ನು ರದ್ದುಪಡಿಸಲಾಗಿದ್ದು, ಮರುಟೆಂಡರ್ ಆಹ್ವಾನಿಸಬೇಕಾಗಿರುತ್ತದೆ. ಪ್ಯಾಕೇಜ್-II ಮತ್ತು ಪ್ಯಾಕೇಜ್-III ರ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿ ತಯಾರಿಕಾ ಹಂತದಲ್ಲಿರುತ್ತದೆ. |
| ಇ) | ರಾಜ್ಯದಲ್ಲಿ QR code-based smart cards for Class-I and Class-II contractors ಯೋಜನೆಯಡಿ ಇಲ್ಲಿಯವರೆಗೆ ಎಷ್ಟು ಗುತ್ತಿಗೆದಾರರು ಅರ್ಜಿ ಸಲ್ಲಿಸಿರುತ್ತಾರೆ; ಮತ್ತು ಎಷ್ಟು ಗುತ್ತಿಗೆದಾರರಿಗೆ ಈ ಯೋಜನೆಯಲ್ಲಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ? | ರಾಜ್ಯದಲ್ಲಿ QR code-based smart cards for Class-I and Class-II contractors ಯೋಜನೆಯಡಿ ಇಲ್ಲಿಯವರೆಗೆ 8135 ಗುತ್ತಿಗೆದಾರರು ಅರ್ಜಿ ಸಲ್ಲಿಸಿದ್ದು, ಅವುಗಳ ಪೈಕಿ 7438 ಗುತ್ತಿಗೆದಾರರಿಗೆ ಸ್ಮಾರ್ಟ್‌ಕಾರ್ಡ್ ವಿತರಿಸಲಾಗಿರುತ್ತದೆ. ಉಳಿಕೆ ಅರ್ಜಿಗಳು ಪರಿಶೀಲನಾ ಹಂತದಲ್ಲಿರುತ್ತದೆ. |

ಸಂಖ್ಯೆ, ಲೋಇ 32 ಇಎಪಿ 2026

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು

<u>**ಅನುಬಂಧ-1**</u>

**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:208 ಕ್ಕೆ ವಿವರಗಳು**

**ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-4 ರಡಿಯಲ್ಲಿ ಅಭಿವೃದ್ಧಿಗೊಳಿಸಲು ಆಯ್ಕೆರುಗೊಳಿಸಲಾಗಿರುವ ರಾಜ್ಯ ಹೆದ್ದಾರಿಗಳ ವಿವರ**

| ಕ್ರ.ಸಂ. | ರಾಜ್ಯ ಹೆದ್ದಾರಿ |
|---|---|
| 1 | ಮಳವಳ್ಳಿಯಿಂದ ಬಾವಲಿ (ಕೇರಳ ಗಡಿ) ವರೆಗಿನ ರಾಜ್ಯ ಹೆದ್ದಾರಿ-33 ರ ರಸ್ತೆ ಅಭಿವೃದ್ಧಿ. (ಬನ್ನೂರು, ಎಚ್.ಡಿ ಕೋಟೆ ಹ್ಯಾಂಡ್‌ಪೋಸ್ಟ್ ಮಾರ್ಗವಾಗಿ) |
| 2 | ಹುಲ್ಲಹಳ್ಳಿಯಿಂದ ಸಂತೇಮರಹಳ್ಳಿ ವರೆಗಿನ ರಾಜ್ಯ ಹೆದ್ದಾರಿ-57 & 84 ರ ರಸ್ತೆ ಅಭಿವೃದ್ಧಿ. (ತಗಡೂರು ಮಾರ್ಗವಾಗಿ) |
| 3 | ಹನೂರಿನಿಂದ ಪಾಲಾರ್ ವರೆಗಿನ ರಾಜ್ಯ ಹೆದ್ದಾರಿ-79 ರ ರಸ್ತೆ ಅಭಿವೃದ್ಧಿ. (ರಾಮಾಪುರ ಮಾರ್ಗವಾಗಿ) |
| 4 | ಮಡಿಕೇರಿಯಿಂದ ದೋಣಿಗಲ್ (NH-75) ವರೆಗಿನ ರಾಜ್ಯ ಹೆದ್ದಾರಿ-27 ರ ರಸ್ತೆ ಅಭಿವೃದ್ಧಿ. (ಮಾದಾಪುರ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ ಮಾರ್ಗವಾಗಿ) |
| 5 | ಶ್ರೀರಂಗಪಟ್ಟಣ (ಪಾಂಡವಪುರ ರೈಲು ನಿಲ್ದಾಣದಿಂದ) ಬಿ.ಎಂ. ರಸ್ತೆ ಜಂಕ್ಷನ್ ಚನ್ನರಾಯಪಟ್ಟಣ ವರೆಗಿನ ರಾಜ್ಯ ಹೆದ್ದಾರಿ-7 ರ ರಸ್ತೆ ಅಭಿವೃದ್ಧಿ. |
| 6 | ಮಾಗಡಿಯಿಂದ ಹುಣಸನಹಳ್ಳಿ ವರೆಗಿನ (ತಮಿಳುನಾಡು ಗಡಿವರೆಗೆ) ರಾಜ್ಯ ಹೆದ್ದಾರಿ-03 ರ ರಸ್ತೆ ಅಭಿವೃದ್ಧಿ. (ರಾಮನಗರ, ಕನಕಪುರ ಮಾರ್ಗವಾಗಿ) |
| 7 | ಚಡಚಣದಿಂದ ಗಾಣಗಾಪುರ ವರೆಗಿನ ರಾಜ್ಯ ಹೆದ್ದಾರಿ-41 & 34 ರ ರಸ್ತೆ ಅಭಿವೃದ್ಧಿ. (ಝುಲ್ಕಿ, ಇಂಡಿ, ಅಫಜಲಪುರ ಮಾರ್ಗವಾಗಿ) |
| 8 | ದಿಂಡಾವರ್ (SH-41) ನಿಂದ ನಲತ್ವಾಡ ವರೆಗಿನ ರಾಜ್ಯ ಹೆದ್ದಾರಿ-177ರ ರಸ್ತೆ ಅಭಿವೃದ್ಧಿ. (ಸೋಮನಾಳ್, ಸಾಸನೂರ್, ಮುಕಿಹಾಳ್, ಹುಲಗಬಾಳ್ ಮಾರ್ಗವಾಗಿ) |
| 9 | ಸಂಕೇಶ್ವರದಿಂದ ಲೋಕಾಪುರ ವರೆಗಿನ ರಾಜ್ಯ ಹೆದ್ದಾರಿ-44 ರ ರಸ್ತೆ ಅಭಿವೃದ್ಧಿ. (ಕಾಮನೂರು ಕ್ರಾಸ್ ಹುಕ್ಕೇರಿ-ಘಟಪ್ರಭಾ-ಅರಭಾವಿಮಠ-ವಡ್ಡರಟ್ಟಿ-ಮಸಗಪ್ಪಿ-ತಿಗಡಿ-ಯಾದವಾಡ ಮಾರ್ಗವಾಗಿ) |
| 10 | ಗಿಣಿಗೇರಾ (NH-67) ಮುಂಡರಗಿ ವರೆಗಿನ ರಾಜ್ಯ ಹೆದ್ದಾರಿ-23 ರ ರಸ್ತೆ ಅಭಿವೃದ್ಧಿ. (ಕೊಪ್ಪಳ ಮಾರ್ಗವಾಗಿ) |
| 11 | ಮ್ಯಾಡನೇರಿ ಕ್ರಾಸ್ (NH-50) ನಿಂದ ಕಾತ್ರಾಳ ಕ್ರಾಸ್ (ಬೇವಿನಕಟ್ಟಿ ಕ್ರಾಸ್) (NH-367) ವರೆಗಿನ ರಾಜ್ಯ ಹೆದ್ದಾರಿ-63 ರ ರಸ್ತೆ ಅಭಿವೃದ್ಧಿ. |